matter with the Government of India. The matter with regard to the fixing or remunerative price or support price will have to be tackled by the Government of India. We will take all the necessary steps to put an end to this matter. I will again speak to the hon. Chief Minister at Delhi and see that the Tobacco Board or the Government of India comes to the rescue of these farmers immediately.

3.30 P.M.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಆಂಧ್ರ ಸರ್ಕಾರದವರು ಬೀಡಿ ಜೊಬ್ಯಾಕೋ ವರ್ಜಿನೀಯ ಟೊಬ್ಯಾಕೋಗೆ ಸಂಬಂಧಿಸಿದ ಹಾಗೆ ರೆಕಮಂಡರಿ ಬೋರ್ಡ್ ಮಾಡಿದ್ದಾರೆ, ಅದೇರೀತಿ ನಮ್ಮಲ್ಲೂ ಮಾಡಿದರೆ ಆಗಾಗ್ಗೆ ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಅನುಕೂಲವಾಗುತ್ತದೆ ಇದನ್ನು ಯೋಚನೆ ಮಾಡುತ್ತೀರಾ ?

SRI M. VEERAPPA MOILY.—This is a suggestion and we can definitely think of it and under the provisions of law, if we can constitute such Board, we can do so.

SRI B.B. SAYANAK.—Sir, on 17th there was discussion between the Chief Minister and the leaders of the agitators. The leaders assured the Chief Minister that they will withdraw the agitation. But still the agitation is going on. I would like to know why the agitation is going on till today.

SRI M. VEERAPPA MOILY.—On that day, in fact the Chief Minister also appreciated the persons who were on strike on the manner in which they have conducted the strike peacefully They have also assured in response to the call given by the Chief Minister that they will call off the strike in view of this assurance. I request through you Mr. Chairman, all the Members hailing from that area and also the farmers to call off the strike so that the Government's hands are strengthened to slove the problem as early as possible.

re:-**(ii) Disturbances at Nellur town, Channagiri Taluk, Shimoga District on 7-3-1981.**

SRI G. BASAVANNAPPA.—Sir, I call the attention of the Chief Minister to the disturbances at Nellur town, Channagiri taluk shimoga district, on 7-3-1981.

SRI M. VEERAPPA MOILY.—Sir, I wish to make the following statement on behalf of the Chief Minister.

1 It is reported that on 7-3-1981 at Nallur village in Shimoga District, a person belonging to one group abus d a person of another group alleging he was supporting pickpockets in the village. An alteration ensued. The elders of the village are reported to have intervened and pacified them.

2 In the night some persons belonging to both the groups assembled in front of the panchayat hall and indulged in pelting of stones in which nine persons sustained injuries. One person who sustained serious head injury succumbed to the injuries subsequently on 8-3-1981.

3 The crowd also indulged in looting and arson. Four shops looted, two shops were burnt and one shop was damaged during the incident.

4 On receipt of information the Superintendent of Police, Shimoga and Assistant Commissioner with reinforcement rushed to Nallur and brought the situation under control. Intensive petrolling was arranged. Prohibitory orders under section 144 Cr. P.C. were enforced for a period of seven days from 7-3-1981. A meeting of the peace committee was held on 8-3-1981.

5 The damage to private property as per the compalints lodged to the Police is about Rs. 5.8 lakhs. Thirty-six cases were registered which are under investigation. Forty-one persons were arrested. The situation is peaceful at present.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಉಪಾಧ್ಯಕ್ಷರೇ ಈ ಗಲಾಟೆ ಆದದ್ದು ಗುಂಪು ಕಲಹ. ಒಬ್ಬ ವ್ಯಕ್ತಿ ಪಿಕ್ ಪಾಕೆಟ್ ಮಾಡಿದ ಎಂದು ನಲ್ಲೂರು ಟೌನ್‌ನಲ್ಲಿ ದೊಡ್ಡ ಅನಾಹುತ ಆಗಿದೆ. ೫.೮ ಲಕ್ಷ ರೂಪಾಯಿಗಳು ಈ ಗಲಾಟೆಯಿಂದ ಲಾಸ್ ಆಗಿದೆ ಎಂದು ಹೇಳಿದರು. ರಸೂಲ್ ಖಾನ್ ಎಂಬ ಹುಡುಗ ಸುಮಾರು ೨೫ ವರ್ಷ ವಯಸ್ಸು ಇರಬಹುದು. ಬ್ರೈನ್ ಕೆಟ್ಟು ಸತ್ತು ಹೋಗಿದ್ದಾನೆ, ಅವನ ತಾಯಿಗೆ ಯಾರು ಸಹಾಯ ಮಾಡುವವರು ಇಲ್ಲ. ಆಕೆ ಜೀವನ ನಡೆಸುವುದು ತುಂಬಾ ಕಷ್ಟ ವಾಗಿದೆ. ಸರ್ಕಾರವೆನೋ ಪರಿಹಾರ ಕೊಟ್ಟಿದೆ. ಸುಮಾರು ಎಳೆಂಟು ಜನ ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಸರ್ಕಾರವೆನೋ ಪರಿಹಾರ ಕೊಡುತ್ತದೆ. ಅದು ಮಂತ್ರಿಗಳ ಸ್ಟೇಟ್‌ಮೆಂಟ್‌ನಲ್ಲಿ ವರದಿಯಾಗಿಲ್ಲ ಅದನ್ನು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾರು ಮೃತಪಟ್ಟಿದ್ದಾರೆ ಅವರ ಸಂಬಂಧಿಕರಿಗೆ ೫ ಸಾವಿರ ರೂಪಾಯಿಗಳನ್ನು ಮುಖ್ಯಮಂತ್ರಿಗಳ ಫಂಡಿನಿಂದ ಕೊಟ್ಟಿದ್ದೇವೆ. ಆಸ್ತಿಪಾಸ್ತಿ ಕಳೆದುಕೊಂಡಂತವರಿಗೆ ಪರಿಹಾರ ಕೊಟ್ಟಿಲ್ಲವೆಂದು ಹೇಳಿದ್ದಾರೆ, ಈ ವಿಚಾರವನ್ನು ಗಮನಿಸಬೇಕಾಗುತ್ತದೆ. ಪರಿಹಾರ ಕೊಡ ಬೇಕಾಗಿದ್ದ ಪಕ್ಷದಲ್ಲಿ ಕೊಡುವಂತಹ ಏರ್ಪಾಡು ಮಾಡುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಆಸ್ತಿಪಾಸ್ತಿಗಳನ್ನು ಕಳೆದುಕೊಂಡವರಿಗೆ ೫೦ ಪರ್‌ಸೆಂಟ್ ತುಂಬಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಈಗ ಮೃತಪಟ್ಟ ಸಂಬಂಧಿಕರಿಗೆ ಕೊಟ್ಟಿರುವ ೫ ಸಾವಿರ ರೂಪಾಯಿಗಳು ಸಾಲದು, ೧೦ ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸರ್ಕಾರ ಪರಿಶೀಲನೆ ಮಾಡುತ್ತದೆ.

† ಶ್ರೀ ಜಿ. ಎಚ್ ಪಟೀಲ್.—ಮಾನ್ಯ ಉಪಾಧ್ಯಕ್ಷರೇ ಇವರ ಹೇಳಿಕೆ ಓದಿದಮೇಲೆ ಅಲ್ಲಿಂದ ಬಂದಂತಹ ಸ್ನೇಹಿತರು ಒರಡು ಕಡೆಯವರು ಹೇಳಿದಹಾಗೆ ವ್ಯತ್ಯಾಸಗಳು ಬಹಳ ಇದೆ ಎಂದು ಕಾಣುತ್ತದೆ. ನಾನು ಹೊಸದಾಗಿ ಏನನ್ನು ಹೇಳುವುದಿಲ್ಲ, ಆಲ್ಲಿಯ ಪರಿಸ್ಥಿತಿ ಬಿಗಡಾಯಿಸಬಾರದು ಎನ್ನುವ ಕಾರಣದಿಂದ ನಾನು ಶಾಂತಿಯನ್ನು ಕಾಪಾಡಿಕೊಂಡು ಹೋಗಬೇಕು. ಕಾರಣ ಒಬ್ಬ ಇನ್ನೊಬ್ಬನನ್ನು ಬೈದುದಕ್ಕೆ ಆಗುವುದಿಲ್ಲ ಬೇರೆ ಕಾರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?. ಈ ಘಟನೆಯ ವಿಷಯ, ವೇಷಸ್ಟಾನದ ಜಾಗಕ್ಕೆ ಸಂಬಂಧಪಟ್ಟದ್ದು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?. ಈ ಇರಿಟೇಟ್ಸ್ ಕ್ಲಾಸ್‌ಗೆ ಮೂಲ ಕಾರಣವೇನು ಎಂಬುದನ್ನು ತಿಳಿದುಕೊಳ್ಳಲು ಸರ್ಕಾರ ಪ್ರಯತ್ನ ಮಾಡಿದೆಯೇ?

ಇಲ್ಲದಿದ್ದರೆ ಈಗಲಾದರೂ ಮೂಲ ಕಾರಣ ತಿಳಿದುಕೊಳ್ಳಲು ಪ್ರಯತ್ನ ಮಾಡುತ್ತೀರಾ?. ನಾನು ಸ್ಥಳದವನು ನಾನು ಸಲಹೆ ಕೊಡುತ್ತೇನೆ. ಅದರ ಪ್ರಕಾರ ಸರ್ಕಾರ ಕ್ರಮವನ್ನು ತೆಗೆದುಕೊಂಡು ಅಲ್ಲಿ ಇರಿಟೆಂಟ್ಸ್‌ಗೆ ಅವಕಾಶ ಕೂಡದೆ ಶಾಂತಿ ಖಾಯಂ ಆಗಿ ಉಳಿಯುವಂತೆ ಆಗುತ್ತದೆ. ರಸೂಲ್ ಖಾನ್ ಏನು ಸತ್ತಿದ್ದಾನೆ ಆತನು ಇನ್ನೂ ಚಿಕ್ಕ ವಯಸ್ಸಿನ ಹುಡುಗ. ತಾಯಿಯ ಸ್ಥಿತಿ ದಾರುಣ, ಚಿಂತಾಜನಕ ಸಾಕುತ್ತಿದ್ದ ಮಗ ಸತ್ತು ಹೋದ. ನೀವು ಕೊಟ್ಟಿರತಕ್ಕ ೫ ಸಾವಿರ ರೂಪಾಯಿಗಳು ಬಹಳ ಕಡಿಮೆ ಯಾಗುತ್ತದೆ. ಇನ್ನು ೧೦ ಸಾವಿರ ರೂಪಾಯಿಗಳನ್ನು ಕೊಟ್ಟು ಅವರ ಮನೆ ಅವರ ತಾಯಿಯ ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಕೇಳುತ್ತೇನೆ, ಸರ್ಕಾರ ಒಪ್ಪುತ್ತದೆ. ಕೊನೆಯ ದಾಗಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಆ ಗುಂಪು, ಈ ಗುಂಪು ಎಂದು ಹೇಳಿ ಎರಡೂ ಕಡೆಯವರನ್ನು ಯಾರು ಚೇಷ್ಟೆ ಮಾಡುವವರು ಇರುತ್ತಾರೆ ಅವರನ್ನು ಹೊರಗೆ ಬಿಟ್ಟು ಸಂಪನ್ನರನ್ನು ಅರೆಸ್ಟ್ ಮಾಡುವುದರಿ ದ ಪರಿಹಾರ ಆಗುವುದಿಲ್ಲ. ಪೋಲೀಸಿನವರಿಗೆ ಯಾರು ಮಿಸ್ಚೀಫ್ ಎಂದು ಗೊತ್ತಿರುತ್ತದೆ. ಅಂತಹವರನ್ನು ಒಳಗೆ ಹಾಕದೆ ಬಿಟ್ಟು ಬಿಟ್ಟಿದ್ದೀರಿ. ಇದರಿಂದ ಅಪಾಯ ಇದೆ. ಒಟ್ಟಿನಲ್ಲಿ ಶಾಂತಿ ಕಾಯಂ ಆಗಿ ಉಳಿಯಲು ವ್ಯವಸ್ಥೆ ಮಾಡುವುದಕ್ಕೆ ತಾವು ಭರವಸೆ ಕೊಡುತ್ತೀರಾ?

ಶ್ರೀ ಎಂ. ವೀರಪ್ಪಮೊಯಿಲಿ,—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಉಪನಾಯಕರು ಹೇಳಿದ ವಿಚಾರವನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆ. ಈ ಘಟನೆಗೆ ಪ್ರಚೋದನೆಯಾಗಿರುವ ಬಗ್ಗೆ ವಿಚಾರ ಮಾಡಿ ವರದಿಯನ್ನು ಕಳುಹಿಸಬೇಕು, ಅಲ್ಲಿ ಪರಿಶೀಲನೆ ಮಾಡಬೇಕು, ಅಲ್ಲಿ ಶಾಂತಿ ಸಾಮ್ಯವಸ್ಥೆಯನ್ನು ಮಾಡಬೇಕೆಂದು ನಾವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ. ಈಗ ತಾವು ಏನು ಹೇಳಿದ್ದೀರಿ, ಕೆಲವರು ಅನಾವಶ್ಯಕವಾಗಿ ಅರೆಸ್ಟ್ ಆಗಿದ್ದಾರೆಂದು ಹೇಳಿದ್ದೀರಿ ಅದನ್ನು ನಾವು ಸಂಪೂರ್ಣವಾಗಿ ಪರಿಶೀಲನೆ ಮಾಡುತ್ತೇವೆ. ಇಂತಹ ಘಟನೆಗಳಲ್ಲಿ ಸಾಮಾನ್ಯವಾಗಿ ೫ ಸಾವಿರ ರೂಪಾಯಿ ಮುಖ್ಯ ಮಂತ್ರಿಗಳ ಪಂಡಾನಿಂದ ಕೊಡುವಂತಾದ್ದು ಇದೆ. ಎಲ್ಲಾ ಕೇಸುಗಳಲ್ಲಿಯೂ ಕೊಡುತ್ತಿದ್ದೇವೆ. ಆದರೆ ಈ ವಿಚಾರದಲ್ಲಿ ಕೆಲವು ಸದಸ್ಯರು ಸಲಹೆ ಕೊಟ್ಟಿದ್ದೀರಿ. ಈ ಘಟನೆಯ ಬಗ್ಗೆ ಯಾವರೀತಿಯಲ್ಲಿ ಶಾಂತಿ ಪಾಲನೆ ಮಾಡಲಿಕ್ಕೆ ಸಾಧ್ಯವಿದೆ ಎಂಬ ಬಗ್ಗೆ, ತಮ್ಮ ಸೂಚನೆ, ಸಲಹೆ ಇದ್ದರೆ ಮಾನ್ಯ ಉಪನಾಯಕರು ಕೊಡಬೇಕೆಂದು ನಾನು ಅವರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ

೩೧೨ನೇ ನಿಯಮದ ಮೇರೆಗೆ

ವಿಷಯ.—ಬೆಳಗಾವಿಯಲ್ಲಿನ ಅಲ್ಯೂಮಿನಿಯಂ ಕಾರ್ಖಾನೆಗೆ ಹೊಂದಿಕೊಂಡಂತೆ ಬಟ್ಟಿಗಿರಣಿಯೊಂದನ್ನು ಶ್ರೀ ಗೋಗಟೆಯವರು ಸ್ಥಾಪಿಸಿರುವುದರಿಂದ ಉದ್ಭವಿಸಿದ ಪರಿಣಾಮಗಳ ವಿಚಾರದ ಬಗ್ಗೆ ಚರ್ಚೆ ನಡೆಸುವುದು.

† ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ನಿಯಮ ೩೧೨ರ ಪ್ರಕಾರ ಬೆಳಗಾವಿ ವಲಯದ ಹೊರ ವಲಯದಲ್ಲಿ ಅಲ್ಯೂಮಿನಿಯಮ್ ಕಾರ್ಖಾನೆ ಪಕ್ಕದಲ್ಲಿರತಕ್ಕ ಹೊನಗೆ ಗ್ರಾಮದಲ್ಲಿ ಶ್ರೀ ಗೋಗಟೆ ಎನ್ನತಕ್ಕ ವಾಣಿಜ್ಯೋದ್ಯಮಿಗಳಿಗೆ ಒಂದು ಬಟ್ಟೆ ಗಿರಣಿಯನ್ನು ಸ್ಥಾಪಿಸುವುದಕ್ಕೆ ೧೦೦ ಎಕರೆ ಅರಣ್ಯ ಭೂಮಿಯನ್ನು ಕೊಟ್ಟು ಅವರಿಗೆ ಇನ್ನಿತರೆ ರಕ್ಷಣೆ, ಪರವಾನಿಗೆ ಕೊಟ್ಟರುವುದರಿಂದ ಕರ್ನಾಟಕದ ಹಿತಕ್ಕೆ ಒದಗಬಹುದಾದಂಥ ಧಕ್ಕೆ ಬಗ್ಗೆ ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಬೆಳಗಾವಿ ಪ್ರಮುಖವಾದಂಥ ನಗರ, ಮತ್ತು ಕರ್ನಾಟಕದ ಜನಮನದಲ್ಲಿ ಅದಕ್ಕೆ ಇರತಕ್ಕಂಥ ಸ್ಥಾನಮಾನ ಇದರ ಬಗ್ಗೆ ನಾನು ಮತ್ತೆ ವರ್ಣಿಸಬೇಕಾದ ಅಗತ್ಯವಿಲ್ಲ. ನಾವು ಈ ರಾಜ್ಯದ ಪುನರ್ ವಿಂಗಡಣೆಯ ಕಾಲದಿಂದಲೂ ಈ ಸಭೆಯಲ್ಲಿ ಪಕ್ಷ ಪಂಗಡಗಳ ಭೇದವಿಲ್ಲದೆ ನಾವು ಬೆಳಗಾವಿಯನ್ನು ನಮ್ಮ ಕರ್ನಾಟಕದಲ್ಲಿ ಉಳಿಸಿಕೊಳ್ಳುವ ಬಗ್ಗೆ ಹೋರಾಟ ನಡೆಸಿಕೊಂಡು ಬಂದಿದ್ದೇವೆ. ನಾವು ಇನ್ನೊಂದು ಜಾಗವನ್ನು ಪಡೆಯುವುದಕ್ಕೆ ಹೋರಾಟ ಮಾಡಿಲ್ಲ. ನಮ್ಮಲ್ಲಿರತಕ್ಕದ್ದನ್ನು ನಾವು ಉಳಿಸಿಕೊಳ್ಳಲಿಕ್ಕೆ ಇದುವರೆಗೂ ಹೋರಾಟ ಮಾಡಬೇಕಾದ ಪರಿಸ್ಥಿತಿ ಬಂದು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಈ ಸದನಕ್ಕೆ ಒಂದು ಆಶ್ವಾಸನೆ ಕೊಟ್ಟರು. ಹಿಂದೆ ಇದ್ದಂಥ ನಿರ್ಣಯಕ್ಕೆ ಸರ್ಕಾರ ಬದ್ಧವಾಗಿದೆ ನಾವೆಲ್ಲರೂ